ಕರ್ನಾಟಕ ವಿಧಾನಸಭೆ

ಗುರುವಾರ 10ನೇ ಜೂನ್ 2004ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಂಡಿತು

ಹಂಗಾಮಿ ಅಧ್ಯಕ್ಷರು: (ಶ್ರೀ ಆರ್.ವಿ. ದೇಶಪಾಂಡೆ)

ಪೀಠವನ್ನು ಅಲಂಕರಿಸಿದ್ದರು

1. ಸದಸ್ಯರಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ

ಹಂಗಾಮಿ ಅಧ್ಯಕ್ಷರು:– ಈಗ ನೂತನ ಸದಸ್ಯರಿಂದ ಪ್ರಮಾಣ ವಚನ·ಸ್ವೀಕಾರ

ಶ್ರೀ ಟಿ. ಗುರುಸಿದ್ದನಗೌಡ (ಜಗಳೂರು):– ಶ್ರೀ ಟಿ. ಗುರುಸಿದ್ದನಗೌಡ ಎಂಬ ಹೆಸರಿನವನಾದ ನಾನು ವಿಧಾನಸಭೆಯ ಸದಸ್ಯನಾಗಿ ನಿರ್ವಾಚನ ಹೊಂದಿದವನಾಗಿ ವಿಧಿದ್ವಾರ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾ ಪೂರ್ವಕವಾಗಿ ನಿರ್ವಹಿಸುತ್ತೇನೆಂದು ಭಗವಂತನ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ. ನಂತರ ಈ ಕೆಳಕಂಡ ಮಾನ್ಯ ಸದಸ್ಯರುಗಳು ಕನ್ನಡ ಇತರ ಭಾಷೆಗಳಲ್ಲಿ, ಭಗವಂತನ ಹೆಸರಿನ ಮೇಲೆ ಸತ್ಯ ನಿಷ್ಠೆಯಿಂದ ಪ್ರತಿಜ್ಞೆ ಸ್ವೀಕಾರ ಮಾಡಿದರು:–

ಸದಸ್ಯರ ಹೆಸರು	ಕ್ಷೇತ್ರ	ಪ್ರಮಾಣ ವಚನ ಸ್ವೀಕರಿಸಿದ ಭಾಷೆ
ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ	(ಕುಂದಾಪುರ)	ಕನ್ನಡ
ಶ್ರೀ ಕಾಕಾ ಸಾಹೇಬ ಪಾಂಡುರಂಗ ಪಾಟೀಲ್	(ನಿಪ್ಪಾಣಿ)	ಆಂಗ್ಲ
ಶ್ರೀ ಹೆಚ್.ಕೆ. ಕುಮಾರಸ್ವಾಮಿ	(ಬೇಲೂರು)	ಕನ್ನಡ
ಶ್ರೀ ವಿ. ಸೋಮಣ್ಣ	(ಬಿನ್ನಿಪೇಟೆ)	ಕನ್ನಡ
ಶ್ರೀ ಎಂ.ಪಿ. ಕುಮಾರ್ ಸ್ವಾಮಿ	(ಮೂಡಿಗೆರೆ)	ಕನ್ನಡ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ ನಾವು ನಿನ್ನೆಯೇ ರೂಲಿಂಗ್ ಕೊಡಿ ಎಂದು ಕೇಳಿದೆವು, ನೀವು ರೂಲಿಂಗ್ ಕೊಡಲಿಲ್ಲ.

ಹಂಗಾಮಿ ಅಧ್ಯಕ್ಷರು:– ಅವರು ಮೊದಲು ಭಗವಂತನ ಹೆಸರು ಹೇಳಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜ್:– ಮಾನ್ಯ ಅಧ್ಯಕ್ಷರೆ, ನಾವು ಭಗವಂತನನ್ನು ಯಾವ ಸ್ವರೂಪದಲ್ಲಿ ನೋಡುತ್ತಾ ಇದ್ದವೋ, ಅದನ್ನು ಇಲ್ಲಿ ಉಲ್ಲೇಖ ಮಾಡಿ, ಪ್ರಮಾಣವಚನ ತೆಗೆದುಕೊಳ್ಳುತ್ತೇವೆಂದು ಹೇಳಿದರೆ, ಅದಕ್ಕೆ ಏಕೆ ಆಕ್ಷೇಪಣೆ ಮಾಡಬೇಕು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಇಲ್ಲಿ ನಾವು ಸಂವಿಧಾನ ಬದ್ಧವಾಗಿ ನಡೆದುಕೊಳ್ಳಬೇಕು. ಅವರ ವೈಯಕ್ತಿಕವಾದಂಥ ಭಾವನೆಗಳನ್ನು ಭದ್ರವಾಗಿ ಇಟ್ಟುಕೊಳ್ಳಲಿ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ:– ಸದಸ್ಯರ ಭಾವನೆಗಳು ಸದನದ ಹೊರಗಡೆ ಇರಲಿ. ಇಲ್ಲಿ ಸಂವಿಧಾನ ಇದೆ. ಕಾನೂನು ಇದೆ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಿನ್ನೆ ಸಂಸದೀಯ ಸಚಿವರು ಹೇಳಿದರು. ನಾನು ಅದನ್ನು ಇಲ್ಲ ಎಂದು ಹೇಳುವುದಿಲ್ಲ.

ಹಂಗಾಮಿ ಅಧ್ಯಕ್ಷರು:– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಭಗವಂತನ ಬಗ್ಗೆ ಅವರವರ ಭಾವನೆಗಳನ್ನು ಅವರು ಇಟ್ಟುಕೊಳ್ಳುವುದಕ್ಕೆ ಯಾರದ್ದೂ ಅಭ್ಯಂತರ ಇಲ್ಲ. ಅವರ ಭಾವನೆಗಳಿಗೆ ನಾವು ಗೌರವ ಕೊಡುತ್ತೇವೆ. ಆದರೆ, ಸಂವಿಧಾನಬದ್ಧವಾಗಿ ರಚನೆಯಾಗಿರತಕ್ಕ ಸದನ ಇದು. ಈ ಸದನದಲ್ಲಿ ಸಂವಿಧಾನ ಬದ್ಧವಾಗಿ ನಡೆದುಕೊಳ್ಳುವುದು ಬಿಟ್ಟು, ಅವರವರ ಭಾವನೆಗಳ ಪ್ರಕಾರವಾಗಿ ನಡೆಯುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್:– ಸಂವಿಧಾನಕ್ಕೆ ವಿರೋಧವೆಂದು ಹೇಳುವುದು ನನಗೆ ಸರಿ ಕಾಣುತ್ತಿಲ್ಲ. ಈಗ ತಾವೇನು ಹೇಳುತ್ತಿದ್ದೀರಿ. ಭಗವಂತ ಎಂದು ಹೇಳಿದಾಗ ನನಗೆ ಯಾವ ಸ್ವರೂಪದಲ್ಲಿ ಕಾಣುತ್ತದೋ ಅದನ್ನು ಇಲ್ಲಿ ಮಾನ್ಯ ಸದಸ್ಯರು ಉಲ್ಲೇಖ ಮಾಡುತ್ತಿದ್ದಾರೆ ಆ ಸ್ವರೂಪವನ್ನು ಉಲ್ಲೇಖ ಮಾಡಲಿಕ್ಕೆ ತಾವು ಅವಕಾಶ ಕೊಡಬೇಕು. ಮಾನ್ಯ ಸದಸ್ಯರು ಇಚ್ಛೆ ಬಂದಹಾಗೆ ಪ್ರಮಾಣ ವಚನ ತೆಗೆದುಕೊಳ್ಳುವುದಕ್ಕೆ ಇದೇನೂ ಅರಳೀಮರದ ಕಟ್ಟೆಯಲ್ಲ. ಪ್ರಮಾಣವಚನ ತೆಗೆದುಕೊಳ್ಳುವುದಕ್ಕೆ ವಿಧಿ ವಿಧಾನಗಳು ಇವೆ. ಇವುಗಳನ್ನು ಅನುಸರಿಸದೇ ಇದ್ದರೆ ಸಂವಿಧಾನಕ್ಕೆ ಅಪಚಾರ.

ಹಂಗಾಮಿ ಅಧ್ಯಕ್ಷರು:– ದಯಮಾಡಿ ಸದಸ್ಯರೆಲ್ಲರೂ ಸಹಕರಿಸಬೇಕು ಇಲ್ಲಿ ಚರ್ಚೆಗೆ ಅವಕಾಶ ಇಲ್ಲ. ನಿನ್ನೆ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಮ್ಮ ಭಾವನೆಗಳು ಇರಬಹುದು, ಇಚ್ಛೆ ಇರಬಹುದು. ನಾವು ಇಲ್ಲಿ ಸಂವಿಧಾನದ ಪ್ರಕಾರವಾಗಿಯೇ ನಡೆಸಬೇಕಾಗುತ್ತದೆ. ಯಾವ ಪ್ರಕಾರ ನಾವು ಪ್ರಮಾಣ ವಚನ ತೆಗೆದುಕೊಳ್ಳಬೇಕು ಅದರ ಫಾರ್ ಮೆಟ್ ಅನ್ನು ತಮ್ಮ ಕೈಯಲ್ಲಿ ಕೊಡುತ್ತೇವೆ. ಅದನ್ನು ತಾವು ಓದಬೇಕಾಗುತ್ತದೆ. ದಯಮಾಡಿ ಎಲ್ಲರೂ ಸಹಕರಿಸಬೇಕು. ನಾವು ಭಗವಂತನನ್ನು ಯಾವ ರೂಪದಲ್ಲಾದರೂ ನೋಡಬಹುದು. ಆದರೆ, ನಮಗೆ ಒಂದು ಸ್ಪಷ್ಟವಾಗಿ ವಿಚಾರವಿದ್ದಾಗ, ನಾವು ಕ್ಷೇತ್ರ ಮತ್ತೊಂದು ಹೇಳುತ್ತಾ ಹೋದರೆ ಅನಾವಶ್ಯಕವಾಗಿ ನಾಳೆ ಕಾನೂನು ಸಮಸ್ಯೆ ಬಂದಾಗ ಸದಸ್ಯರಿಗೆ ತೊಂದರೆಯಾಗಬಹುದು. ಆ ದೃಷ್ಟಿಯಿಂದ ದಯಮಾಡಿ, ಈಗಾಗಲೇ ನಾನೇನು ಹೇಳಿದ್ದೇನೆ, ಆ ಪ್ರಕಾರ ಮಾನ್ಯ ಗೌರವಾನ್ವಿತ ಸದಸ್ಯರುಗಳು ಸಹಕರಿಸಬೇಕು. ನಿಮ್ಮ ಕೈಯಲ್ಲಿ ಯಾವ ಫಾರ್‌ಮೆಟ್ ಕೊಡುತ್ತೇವೆ, ಆ ಪ್ರಕಾರ ಪ್ರಮಾಣ ವಚನ ತೆಗೆದುಕೊಳ್ಳುತ್ತಾ ಹೋದರೆ ಬಹಳ ಒಳ್ಳೆಯದು.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಸಂವಿಧಾನಬದ್ಧವಾಗಿ ಎಲ್ಲಿ ಅಪಚಾರ ವಾಗುತ್ತದೆಂದರೆ, ಅಲ್ಲಿ ಏನು ಅಣೆ ಮಾಡುತ್ತೇವೆ, ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಮಾತ್ರ ಆಗುತ್ತದೆ.

ಶ್ರೀ ಅಮರೇಗೌಡ ಬಯ್ಯಾಪುರ:– ನೀವು ಹೇಳುವುದಕ್ಕೇ ಮನಸ್ಸು ಒಪ್ಪಲಿಲ್ಲವೆಂದರೆ, ಇನ್ನು ಆಚರಣೆಗೆ ಯಾವ ರೀತಿ ತರುತ್ತೀರಿ?

ಹಂಗಾಮಿ ಅಧ್ಯಕ್ಷರು:– ಸಾಕು. ದಯವಿಟ್ಟು ಕುಳಿತುಕೊಳ್ಳಿ. ಈಗ ಪ್ರಮಾಣ ವಚನ ಸ್ವೀಕಾರ ಮುಂದುವರಿಯುತ್ತದೆ.

(ಈ ಕೆಳಕಂಡ ಮಾನ್ಯ ಸದಸ್ಯರುಗಳ ಕನ್ನಡ : ಇತರ ಭಾಷೆಗಳಲ್ಲಿ ಭಗವಂತನ ಹೆಸರಿನ ಮೇಲೆ ಪ್ರಮಾಣವಚನ ಸತ್ಯ ನಿಷ್ಠೆಯಿಂದ ಪ್ರತಿಜ್ಞೆ ಮಾಡಿದರು)

ಸದಸ್ಯರ ಹೆಸರು	ಕ್ಷೇತ್ರ	ಪ್ರಮಾಣ ವಚನ
ಶ್ರೀ ಮಹಾಗುಂಡಪ್ಪ ಕಲ್ಲಪ್ಪ ಪಟ್ಟಣ ಶೆಟ್ಟಿ	(ಬಾದಾಮಿ)	ಕನ್ನಡ
ಶ್ರೀ ಮೋಹನ ಕೃಷ್ಣ ಶೆಟ್ಟಿ	(ಕುಮುಟಾ)	ಕನ್ನಡ
ಶ್ರೀ ನಿರ್ಮಲ್ ಸುರಾನ	(ಭಾರತೀನಗರ)	ಕನ್ನಡ
ಶ್ರೀ ಎ.ಟಿ. ರಾಮಸ್ವಾಮಿ	(ಅರಕಲಗೂಡು)	ಕನ್ನಡ
ಶ್ರೀ ಎಂ.ಪಿ. ರೇಣುಕಾಚಾರ್ಯ	(ಹೊನ್ನಾಳಿ)	ಕನ್ನಡ

11.30 ಪಿಎಂ

ಹಂಗಾಮಿ ಅಧ್ಯಕ್ಷರು:– ನಾನು ಈಗ ಒಂದು ವಿಚಾರವನ್ನು ಹೇಳಿದ್ದೇನೆ. ಸದಸ್ಯರು ಸಹಕಾರ ಮಾಡಬೇಕು. ಮಾಡದಿದ್ದರೆ ಕಾನೂನಿನ ಪ್ರಕಾರ ಹೋಗಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ ತಾವು ಅದರ ಬಗ್ಗೆ ಸ್ಪಷ್ಟವಾದ ಒಂದು ತೀರ್ಮ ಕೊಡಬೇಕೆಂದು ಕೇಳಿದ್ದೆವು.

ಹಂಗಾಮಿ ಅಧ್ಯಕ್ಷರು:– ನಾನು ಈಗಾಗಲೇ ಹೇಳಿದ್ದೇನೆ. ಸುಪ್ರೀಂ ಕೋರ್ಟ್ ತೀರ್ಮ ಏನು ಇದೆ ಅದನ್ನು ತನ್ನಿ ಎಂದು ಅಧಿಕಾರಿಗಳಿಗೆ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಇದು ಕಡ್ಡಾಯ, ತಾವೀಗ ಹೇಳಬೇಕು. ತಾವು ಹೇಳಿದ ಹಾಗೆ ಮಾಡಬೇಕೆಂದು ಹೇಳಬೇಕು. ತಾವು ಇದರ ಬಗ್ಗೆ ಸ್ಪಷ್ಟವಾಗಿ ರೂಲಿಂಗ್ ಕೊಡಬೇಕು. ಒಂದು ಇತಿಹಾಸ ನಿರ್ಮಾಣವಾಗಲಿ.

ಹಂಗಾಮಿ ಅಧ್ಯಕ್ಷರು:– ಎಲ್ಲರೂ ದಯಮಾಡಿ ಕೇಳಿ. ನಾನು ಒಂದಲ್ಲ, ಎರಡು ಸಲ ನಿನ್ನೆ ಇವತ್ತು ಗೌರವಾನ್ವಿತ ಸದಸ್ಯರಲ್ಲಿ ಮನವಿ ಮಾಡಿಕೊಂಡಿದ್ದೇನೆ. ಯಾವ ಪ್ರಕಾರ ಸಂವಿಧಾನದಲ್ಲಿ ಇದೆ ಅದೇ ಪ್ರಕಾರವಾಗಿ ನಾವು ಒಂದು ಫಾರ್ಮೆಟ್ ಮಾಡಿ ಕೊಟ್ಟಿದ್ದೇವೆ. ಆದರೆ ಹಲವರು ಜನ ಮಾನ್ಯ ಸದಸ್ಯರು ನಾವು ಹೇಳಿದ್ದರೂ ಸಹ ಪುನಃ ಬಂದು ಕ್ಷೇತ್ರದ ಹೆಸರು, ಮತ್ತೊಂದು ಹೆಸರು ಹೇಳುತ್ತಿದ್ದಾರೆ. ಹೇಳಬಾರದು ಎಂದು ನಾನು ಹೇಳುತ್ತಿಲ್ಲ. ಆದರೆ ಸಂವಿಧಾನದ ಪ್ರಕಾರ ಆಗಬೇಕು ಈ ಸದನವನ್ನು ನಾನು ಸಂವಿಧಾನದ ಪ್ರಕಾರ ನಡೆಸಬೇಕಾಗುತ್ತದೆ. ಆದ್ದರಿಂದ ನಾನು ಇವತ್ತು ನಿರ್ಣಯ ಕೊಡುತ್ತಿದ್ದೇನೆ ಕಡ್ಡಾಯವಾಗಿ ಏನು ಫಾರ್ಮೆಟ್ ಇದೇ ಆ ಪ್ರಕಾರವಾಗಿ ತಾವು ಪ್ರತಿಜ್ಞೆ ತೆಗೆದುಕೊಳ್ಳಬೇಕು.

ಪ್ರಮಾಣ ವಚನ ಸ್ವೀಕಾರ (ಮುಂದುವರಿದಿದು)

ಸದಸ್ಯರ ಹೆಸರು	ಕ್ಷೇತ್ರ	ಪ್ರಮಾಣ ವಚನ ಸ್ವೀಕಾರ
ಶ್ರೀ ಶಿವಾನಂದ ನಾಯಕ್	(ಭಟ್ಕಳ್)	ಕನ್ನಡ
ಶ್ರೀ ಎಂ.ಕೆ. ಸೋಮಶೇಖರ್	(ಕೃಷ್ಣರಾಜ)	ಕನ್ನಡ

ಸದಸ್ಯರ ಹೆಸರು	ಕ್ಷೇತ್ರ	ಪ್ರಮಾಣವಚನ ಸ್ವೀಕರಿಸುವ ಭಾಷೆ
ಶ್ರೀ ಶ್ರೀರಾಮುಲು	(ಬಳ್ಳಾರಿ)	ಕನ್ನಡ
ಶ್ರೀ ಎಂ. ಶ್ರೀನಿವಾಸ್	(ಮಂಡ್ಯ)	ಕನ್ನಡ
ಶ್ರೀ ಎಸ್.ಆರ್. ಶ್ರೀನಿವಾಸ್	(ಗುಬ್ಬಿ)	ಕನ್ನಡ
ಶ್ರೀ ಡಿ. ಸುಧಾಕರ್	(ಚಳ್ಳಕೆರೆ)	ಕನ್ನಡ
ಶ್ರೀ ಸುನಿಲ್ ಕುಮಾರ್	(ಕಾರ್ಕಳ)	ಕನ್ನಡ
ಶ್ರೀ ಸುನಿಲ್ ಮಲ್ಲಾಪುರ್	(ಶಹಬಾದ್)	ಕನ್ನಡ
ಶ್ರೀಮತಿ ಜೆ. ಸುನೀತ ವೀರಪ್ಪಗೌಡ	(ಬನ್ನೂರು)	ಕನ್ನಡ
ಶ್ರೀ ಎನ್. ಸೂರ್ಯನಾರಾಯಣರೆಡ್ಡಿ	(ಕುರುಗೋಡು)	ಕನ್ನಡ
ಶ್ರೀ ಡಿ.ಸಿ. ತಮ್ಮಣ್ಣ	(ಮದ್ದೂರು)	ಕನ್ನಡ
ಶ್ರೀ ಕೆ.ಎಂ. ತಿಮ್ಮರಾಯಪ್ಪ	(ಪಾವಗಡ)	ಕನ್ನಡ
ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ	(ಚಿತ್ರದುರ್ಗ)	ಕನ್ನಡ
ಶ್ರೀ ಸಿ.ಎಂ. ಉದಾಸಿ	(ಹಾನಗಲ್)	ಕನ್ನಡ
ಶ್ರೀ ಎ.ಪಿ. ಉಮಾಪತಿ	(ಹೊಳಲ್ಕೆರೆ)	ಕನ್ನಡ
ಶ್ರೀ ವೈಜನಾಥ ಪಾಟೀಲ್	(ಚಿಂಚೋಳಿ)	ಕನ್ನಡ
ಶ್ರೀ ವೀರಬಸವಂತರೆಡ್ಡಿ ಮುದ್ನಾಳ್	(ಯಾದಗೀರ್)	ಕನ್ನಡ
ಶ್ರೀ ಜಿ. ವೀರಪ್ಪ ದೇವಪ್ಪ ಕೆಸರಟ್ಟಿ	(ಕನಕಗಿರಿ)	ಕನ್ನಡ
ಶ್ರೀ ಬಿ.ಪಿ. ವೆಂಕಟಪ್ಪ ಮುನಿಯಪ್ಪ	(ಬೇತಮಂಗಲ)	ಕನ್ನಡ
ಶ್ರೀ ಕೆ. ವೆಂಕಟೇಶ್	(ಪಿರಿಯಪಟ್ಟಣ)	ಕನ್ನಡ
ಶ್ರೀ ಆರ್. ಶ್ರೀನಿವಾಸ್	(ಮುಳಬಾಗಿಲು)	ಕನ್ನಡ
ಶ್ರೀ ಎಂ.ಪಿ. ವೆಂಕಟೇಶ್	(ಹೆಗ್ಗಡದೇವನಕೋಟೆ)	ಕನ್ನಡ
ಶ್ರೀ ವಿನಯ ಕುಲಕರ್ಣಿ	(ಧಾರವಾಡ ರೂರಲ್)	ಕನ್ನಡ
ಶ್ರೀ ಹೆಚ್.ಎಂ. ವಿಶ್ವನಾಥ್	(ಸಕಲೇಶಪುರ)	ಕನ್ನಡ
ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ	(ಅಂಕೋಲ)	ಕನ್ನಡ
ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ	(ಚಿತ್ತಾಪುರ)	ಕನ್ನಡ
ಶ್ರೀ ವಿವೇಕಾನಂದ ವೈದ್ಯ	(ಸಿಸಿ)	ಕನ್ನಡ
ಶ್ರೀ ಯಾದವಾಡ ಮಹದೇವಪ್ಪ	ಶಿವಲಿಂಗಪ್ಪ (ರಾಮದುರ್ಗ)	ಕನ್ನಡ
ಶ್ರೀ ಸಿ.ಪಿ. ಯೋಗೇಶ್ವರ	(ಚನ್ನಪಟ್ಟಣ)	ಕನ್ನಡ
ಶ್ರೀ ಎನ್. ಯೋಗೀಶ್ ಭಟ್	(ಮಂಗಳೂರು)	ಸಂಸ್ಕೃತ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೆ, ನಾವೆಲ್ಲರೂ ನಮ್ಮ ಮತದಾರರ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಬೇಕು.

ಶ್ರೀ ಎನ್. ಯೋಗೀಶ್ ಭಟ್:– ಭಾರತದ ಎಲ್ಲ ಭಾಷೆಗಳಲ್ಲಿಯೂ ಮಾತ ನಾಡಬಹುದಲ್ಲವೆ?

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಸದಸ್ಯರು ಅಲ್ಲಿ ನಿಂತು ಮಾತನಾಡುವ ಅಧಿಕಾರ ಇಲ್ಲವಲ್ಲ?

ಶ್ರೀ ಬಿ. ಶಿವರಾಮು (ಗಂಡಸಿ) ಕನ್ನಡ

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರ್ಕಿಹೊಳಿ (ಅರಭಾವಿ) ಕನ್ನಡ

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ ನೂರಾರು ಜನರಿಗೆ ಸದಸ್ಯರು ಗ್ಯಾಲರಿಗೆ ಹೋಗಲು ಪಾಸ್‌ಗಳನ್ನು ಕೊಟ್ಟಿದ್ದಾರೆ. ಆದರೆ ಮಾರ್ಷಲ್ ಬಿಡುತ್ತಿಲ್ಲ. ಇದರಿಂದ ಗೊಂದಲವಾಗುತ್ತಿದೆ. ತಾವು ದಯವಿಟ್ಟು ಅವರಿಗೆ ನಿರ್ದೇಶನ ನೀಡಬೇಕು.

ಹಂಗಾಮಿ ಅಧ್ಯಕ್ಷರು:– ಗೌರವಾನ್ವಿತ ಸದಸ್ಯರು ಯಾರಿಗೆ ಪಾಸ್‌ಗಳನ್ನು ಕೊಟ್ಟಿದ್ದಾರೆ ಅವರನ್ನು ಗ್ಯಾಲರಿಗೆ ಬಿಡಲು ಹೇಳಿ.

12.00 ಪಿಎಂ

ಹಂಗಾಮಿ ಅಧ್ಯಕ್ಷರು:– ಸಭೆಯ ಮುಂದಿರುವ ಎರಡನೆಯ ವಿಷಯ ಏನೆಂದರೆ ಈ ಮನೆಯ ಗೌರವಾನ್ವಿತ ಅಧ್ಯಕ್ಷರ ಚುನಾವಣೆ. ಮಾನ್ಯ ಶ್ರೀ ಕೃಷ್ಣರವರನ್ನು ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಧರ್ಮಸಿಂಗ್ ರವರು ಸೂಚಿಸುವುದು ಹಾಗೂ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಅನುಮೋದಿಸುವುದು.

2. ಅಧ್ಯಕ್ಷರ ಚುನಾವಣೆ

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು):– ಸನ್ಮಾನ್ಯ ಸಭಾಧ್ಯಕ್ಷರೆ, ಈ ಸದನದ ಮಾನ್ಯ ಸದಸ್ಯರಾದ ಶ್ರೀ ಕೃಷ್ಣ ಅವರನ್ನು ಹನ್ನೆರಡನೆಯ ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸ ಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಸಾರಿಗೆ ಸಚಿವರು):– ಮಾನ್ಯ ಅಧ್ಯಕ್ಷರೆ, "ಮಾನ್ಯ ಮುಖ್ಯಮಂತ್ರಿಯವರು ಸೂಚಿಸಿರುವ ಈ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಹಂಗಾಮಿ ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಯವರಾದ ಧರ್ಮಸಿಂಗ್ ರವರು ಸೂಚಿಸಿರುವ ಹಾಗೂ ಮಾನ್ಯ ಜಲಸಂಪನ್ಮೂಲ ಸಾರಿಗೆ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

" ಶ್ರೀ ಕೃಷ್ಣರವರನ್ನು ಹನ್ನೆರಡನೆಯ ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸುವುದು." ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಶ್ರೀ ಕೃಷ್ಣ ಅವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

108-6 **+ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು):**– ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಏನು ನೂತನ ಸದಸ್ಯರುಗಳು ಆರಿಸಿ ಬಂದಿದ್ದಾರೆ, ಅವರು ತಮ್ಮನ್ನು ಬಹಳ ಸಂತೋಷದಿಂದ